ದಿನಾಂಕಃ  06.06.2026 ರಂದು ಸಾಕ್ಷಿಯನ್ನು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ ಬಿ. ಕೆ. ಜೆ  ವಕೀಲರಿಂದಃ</u>**

ನಾನು 2 ನೇ ತರಗತಿಯವರೆಗೆ ಓದಿರುತ್ತೇನೆ. ಪ್ರಸ್ತುತ ಪ್ರಕರಣವನ್ನು ಯಾರು ಯಾರ ಮೇಲೆ ದಾಖಲಿಸಿರುತ್ತಾರೆನ್ನುವ ಪ್ರಶ್ನೆಗೆ ಸಾಕ್ಷಿಯು ಏನು ಉತ್ತರ ಕೊಡದೇ ಸುಮ್ಮನೆ ನಿಂತುಕೊಂಡಿರುತ್ತಾರೆ. 1 ನೇ ಪ್ರತಿವಾದಿಯ ತಂದೆ ಸುಭಾಸ ಈ 4-5 ವರ್ಷಗಳ ಹಿಂದೆ  ತೀರಿಕೊಂಡಿರುತ್ತಾರೆ.  ವಾದಿಯನ್ನು ನಾನು ನೋಡಿಲ್ಲ ಆದರೆ ಆತನಿಗೆ ಎಷ್ಟು ಜನ ಮಕ್ಕಳು ಇರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುವ ಸಂಗತಿಗಳಿಗೆ ಪೂರಕವಾಗಿ ದಾಖಲೆಗಳನ್ನು ನೋಡಿರುತ್ತೇನೆ.  ಯಾವ ದಾಖಲೆಗಳನ್ನು ನೋಡಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸರ್ವೆ ಮಾಡಲು ಬಂದಿದ್ದು, ಅಳತೆ ಮಾಡಿರುವ ಬಗ್ಗೆ ದಾಖಲೆಯನ್ನು ನೋಡಿರುತ್ತೇನೆಂದು ನುಡಿಯುತ್ತಾರೆ.  ಸದರಿ ದಾಖಲೆಯನ್ನು ಹೊರತುಪಡಿಸಿ ಬೇರೆ

ದಾಖಲೆಯನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ಸುಭಾಸನ ಮಕ್ಕಳು ಕಬ್ಜೆಯಲ್ಲಿರುತ್ತಾರೆಂದು ನುಡಿಯುತ್ತಾರೆ. ಸದರಿ ಸುಭಾಸನ ಮಕ್ಕಳು ಯಾವ ಆಧಾರದ ಮೇಲೆ ಕಬ್ಜೆಯಲ್ಲಿರುತ್ತಾರೆನ್ನುವ ಪ್ರಶ್ನೆಗೆ ಸಾಕ್ಷಿಯು ಅವರೇ ಕಬ್ಜೆಯಲ್ಲಿರುತ್ತಾರೆಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿರುವ ಸಂಗತಿಗಳ ಬಗ್ಗೆ ನನಗೆ ತಿಳಿದಿರುತ್ತದೆ. ಸರ್ವೆ ಮಾಡಿಸಿರುವ ಬಗ್ಗೆ ಹಾಗೂ ಸುಭಾಸ ಕಬ್ಜೆಯಲ್ಲಿದ್ದ ಬಗ್ಗೆ ಹಾಗೂ ಆತನು ತೀರಿಕೊಂಡ ನಂತರ ಆತನ ಹೆಂಡತಿ ಮಕ್ಕಳು ಇರುವ ಬಗ್ಗೆ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂಬರ 20 ಇರುತ್ತದೆ. ಅದರ ಹಿಸ್ಸಾ ನಂಬರ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ದಾವಾ ಆಸ್ತಿ 01 ಎಕರೆ 16 ಗುಂಟೆ ಜಮೀನಿನ ಪೂರ್ವಕ್ಕೆ -ಲಕ್ಷ್ಮಣ ಸಿದ್ರಾಮ ಗುಂಡಪ್ಪಗೋಳ ಇತನ ಜಮೀನು ಇರುತ್ತದೆಂದರೆ ನಿಜ. ಅದೇ ರೀತಿ ಪಶ್ಚಿಮಕ್ಕೆ- ಕಸ್ತೂರಿ ದಾನವ್ವಗೋಳ ಇವರ ಜಮೀನು ಇರುತ್ತದೆಂದರೆ ನಿಜ. ಉತ್ತರಕ್ಕೆ- ಸದಾಶಿವ ಗುಂಡಪ್ಪಗೋಳ ಇವರ ಜಮೀನು ಹಾಗೂ ದಕ್ಷಿಣಕ್ಕೆ-ಬಸಪ್ಪ ಗುಂಡಪ್ಪಗೋಳರವರ ಜಮೀನು ಇರುತ್ತದೆಂದರೆ ನಿಜ.

ದಾವಾ ಆಸ್ತಿಯು ವಾದಿಯ ಹೆಸರಿಗೆ ಇರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಭಾಸನ ಹೆಸರಿಗೆ ಇರುತ್ತದೆಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯು ಸುಭಾಸನಿಗೆ ಹೇಗೆ ಬಂದಿರುತ್ತದೆಂದರೆ ಆತನು ಖರೀದಿಸಿರುತ್ತಾನೆಂದು ನುಡಿಯುತ್ತಾರೆ. ಯಾರಿಂದ ಖರೀದಿಸಿರುತ್ತಾನೆಂದು ನನಗೆ ಗೊತ್ತಿಲ್ಲ. 20 ವರ್ಷಗಳ ಹಿಂದೆ ಖರೀದಿಸಿರುತ್ತಾನೆ. ಖರೀದಿ ಪತ್ರವನ್ನು ನೋಡಿರುತ್ತೇನೆ. ಸದರಿ ಖರೀದಿ ಪತ್ರವನ್ನು ಪ್ರತಿವಾದಿಯರು ಹಾಜರುಪಡಿಸಿರುತ್ತಾರೆ. ಸದರಿ ಖರೀದಿ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಹಾಕಿರುವುದಿಲ್ಲ. ವಾದಿಯು ಸುಭಾಸನಿಗೆ ದಾವಾ ಆಸ್ತಿಗೆ

ಸಂಬಂಧಿಸಿದಂತೆ ಹಕ್ಕು ಬಿಟ್ಟ ಪತ್ರದ ಬಗ್ಗೆ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿರುತ್ತೀರಾ? ಎಂದರೆ ಸಾಕ್ಷಿಯ ಯಾವುದೇ ಸಮಂಜಸವಾದ ಉತ್ತರ ನೀಡದೇ ಸುಮ್ಮನೆ ನಿಂತುಕೊಂಡಿರುತ್ತಾರೆ. ವಾದಿಯು ದುರುದುಂಡಿ ಹದ್ದಿಯಲ್ಲಿರುವ ತಮ್ಮ ಹೊಲದಲ್ಲಿ ವಾಸವಾಗಿದ್ದಾನೆ. ಸದರಿ ಹೊಲದಲ್ಲಿ ವಾದಿ ಮನೆ ಕಟ್ಟಿಸಿದ್ದಾನೆಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಮೋಜಣಿ ಮಾಡುವ ಕಾಲಕ್ಕೆ ವಾದಿಯು ಹಾಜರು ಇದ್ದನು. ಸರ್ವೆ ನಂಬರ 20 ನ್ನು ಸಂಪೂರ್ಣವಾಗಿ ಅಳತೆ ಮಾಡಿರುತ್ತಾರೆ. ಸದರಿ ಸರ್ವೆ ನಂಬರನಲ್ಲಿ ಎಷ್ಟು ಹಿಸ್ಸೆಗಳು ಇರುತ್ತವೆ ಎಂದರೆ ಸಾಕ್ಷಿಯು ಯಾವುದೇ ಸಮರ್ಪಕವಾದ ಉತ್ತರವನ್ನು ನೀಡಿರುವುದಿಲ್ಲ. ಸರ್ವೆ ನಂಬರ 20 ರ ಪೀಟಿ ಶೀಟನ್ನು ಪ್ರಶ್ನಿಸಿ ವಾದಿ DDLR ಬೆಳಗಾವಿರವರ ಮುಂದೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾನೆಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯು ಮುಂಚೆಯಿಂದಲೂ ವಾದಿಯ ಕಬ್ಜಾ ವಹಿವಾಟಿಯಲ್ಲಿರುತ್ತದೆಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿ ಮತ್ತು ಸುಭಾಸರವರ ಮದ್ಯೆ ವಾಟ್ನಿಯಾಗಿರುತ್ತದೆಂದರೆ ನಿಜ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯು ಸುಭಾಸನ ಹೆಸರಿಗೆ ಆಗಿರುತ್ತದೆಂದು ನುಡಿಯುತ್ತಾರೆ. ಸದರಿ ವಾಟ್ನಿಯಲ್ಲಿ ದಾವಾ ಆಸ್ತಿಯು ವಾದಿಯ ಹೆಸರಿಗೆ ಬಂದಿರುತ್ತದೆಂದರೆ ಸರಿಯಲ್ಲ.

ವಾದಿಯು ಅನಕ್ಷರಸ್ಥ ಇರುತ್ತಾನೆಂದರೆ ನನಗೆ ಗೊತ್ತಿಲ್ಲ. ಸುಭಾಸ ಇತನು ವಿದ್ಯಾವಂತ ಹಾಗೂ ಬುದ್ಧಿವಂತನಾಗಿದ್ದನು ಎಂದರೆ ಸರಿಯಲ್ಲ. ಸದರಿ ಸುಭಾಸ ವಿದ್ಯಾವಂತ ಹಾಗೂ ಬುದ್ಧಿವಂತನಾಗಿದ್ದರೂ ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯು ಯಾವ ಕಾಲಕ್ಕೂ ಸುಭಾಸ ಹಾಗೂ ಆತನ ಮಕ್ಕಳ ಕಬ್ಜಾ ವಹಿವಾಟಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಇವತ್ತಿಗೂ ಸಹ ದಾವಾ ಆಸ್ತಿಯು ವಾದಿಯ ಕಬ್ಜಾ ವಹಿವಾಟಿಯಲ್ಲಿದ್ದು, ಅದರಲ್ಲಿ ಮನೆ ಕಟ್ಟಿಸಿಕೊಂಡು ವಾಸವಾಗಿದ್ದಾನೆಂದರೆ ಸರಿಯಲ್ಲ. ವಾದಿಯು ನನ್ನ ಮೇಲೆ

DDLR,ಬೆಳಗಾವಿ ಇವರ ಮುಂದೆ ಕೇಸು ದಾಖಲಿಸಿದ್ದರಿಂದ ಆತನ ಮೇಲೆ ಸಿಟ್ಟಾಗಿ ಪ್ರತಿವಾದಿಯರ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಮಾತನ್ನು ಕೇಳಿಕೊಂಡು ಅವರಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನ್ನ ಜಮೀನುಗಳು ಇರುತ್ತವೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿದ್ದು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ